# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್‌ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 17 /2016

**ಚಾಸಾ ಃ- 08 / ಪ್ರಾಸಾ ಃ- 05**

| | |
|---|---|
| ಹೆಸರು | ಗೋಪಾಲಕೃಷ್ಣ |
| ತಂದೆ ಹೆಸರು | ಜಗನ್ನಾಥಶೆಟ್ಟಿ |
| ವಯಸ್ಸು | 49 |
| ಉದ್ಯೋಗ | ಜ್ಯುವೆಲರಿ ಶಾಪ್ ಕೆಲಸ |
| ವಿಳಾಸ | ಮಾಗಡಿ ಟೌನ್ |

**ದಿನಾಂಕಃ 25.07.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈಗ ಸಾಕ್ಷಿಗೆ ಅಮಾನತು ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೋಲಿಸರು ಕೋರಿಕೆಯ ಮೇರೆಗೆ ಮಾಡಿರುತ್ತೇನೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 26.05.2013 ರಂದು ನನ್ನ ಮತ್ತು ಚಾಸಾ-9 ರವರ ಸಮಕ್ಷಮ ಶ್ರೀ ಮಾರುತಿ ಸೈಬರ್ ಸಂಟರ್ ಬಳಿ 5 ಕಂಪ್ಯೂಟರ್ ಗಳ ಸಿಪಿಯು ಗಳನ್ನು

ಪರಿಶೀಲಿಸಲಾಗಿ 4 ಸೂಪರ್ ಕಂಪ್ಯೂಟರ್ ಕಂಪನಿ ಗಳ ಮತ್ತು ಬ್ರೊನಿಕ್ ಕಂಪನಿಯ ಒಂದು ಸಿಪಿಯು, 5 ಹಾರ್ಡ್ ಡಿಸ್ಕ ಗಳನ್ನು ಅಮಾನತು ಪಡಿಸಿಕೊಂಡು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಬಿ ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತು ಪಡಿಸಿಕೊಂಡಿುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅಮಾನತು ಪಂಚನಾಮೆಯನ್ನು ಸಂಜೆ 5.00 ರಿಂದ 6.00 ಗಂಟೆಯವರೆಗೆ ಜರುಗಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ಪರಕಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಾನು ಸೈಬರ್ ಸೆಂನಟರ್ ಅನ್ನು ಪುರಸಭೆಯಿಂದ ಅನುಮತಿ ಪಡೆದು ತೆಗೆದಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದಕ್ಕೆ ಮಾರುತಿ ಸೈಬರ್ ಸೆಂಟರ್ ಎಂದು ಹೆಸರು ಇಟ್ಟಿದ್ದೆನು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ಕಂಪ್ಯೂಟರ್ ಆಪರೇಟಿಂಗ್ ಕೆಲಸ ಬರದ ಕಾರಣ ಅದರ ಉಸ್ತುವಾರಿ ನೋಡಿಕೊಳ್ಳಲು ಪವನ್ ಕುಮಾರ್ ಎಂಬುವವರನ್ನು ನೇಮಕ ಮಾಡಿಕೊಂಡಿದ್ದಿರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪವನ್ ಕುಮಾರ್ ರವರು ವರ್ಷಕ್ಕೆ 70 ಸಾವಿರ ರೂ. ಕೊಡುತ್ತೇನೆ, ಸೈಬರ್ ಸೆಂಟರ್ ಅನ್ನು ನನಗೆ ಬಿಟ್ಟು ಕೊಡಿ ನಾನೆ ನಡೆಸಿಕೊಂಡು ಹೋಗುತ್ತೇನೆ ಎಂದು ತಿಳಿಸಿದ್ದು ಆತನಿಗೆ ಕಂಪ್ಯೂಟರ್ ಆಪರೇಟಿಂಗ್ ಕೆಲಸ ಬರುತ್ತಿದ್ದರಿಂದ ನಾನು ಒಪ್ಪಿಕೊಂಡು ವರ್ಷಕ್ಕೆ ರೂ. 70,000/- ಹಣ ಕೊಡುವಂತೆ ತಿಳಿಸಿ ಸೈಬರ್ ಸೆಂಟರ್ ಅನ್ನು ಆತನ ವಶಕ್ಕೆ ನೀಡಿದ್ದೆನು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸೈಬರ್ ಸೆಂಟರ್ ನಡೆಸಲು ಬೇಕಾದ ಕಂಪ್ಯೂಟರ್ ಗಳು ಮತ್ತು ಇತರ ಉಪಕರಣಗಳನ್ನು ಆತನೇ ಕರೀದಿ ಮಾಡಿಕೊಂಡು ಸೈಬರ್ ಸೆಂಟರ್ ನಡೆಸುತ್ತಿದ್ದನು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆತನ ಜೂತೆಗೆ ಆತನ ಸ್ನೇಹಿತನಾದ ಹನುಮಾಪುರ ಪುನೀತ್ ಎಂಬುವವನು ಕೆಲಸ ಮಾಡಿಕೊಂಡಿದ್ದನು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆತನೂ ಸಹ ಕಂಪ್ಯೂಟರ್ ತರಭೇತಿ ಹೊಂದಿದ್ದನು ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ಸದರಿಯವರು ಕಂಪ್ಯೂಟರ್ ಸೆಂಟರ್ ನಲ್ಲಿ ರೇಷನ್ ಕಾರ್ಡ್ ಪೋಟೋ ಹೊಡೆಸುವುದು, ಆನ್ ಲೈನ್ ನಲ್ಲಿ ಅಪ್ಲಿಕೇಶನ್ ಹಾಕುವುದು , ಕೆಲಸಕ್ಕೆ ಅರ್ಜಿ ಹಾಕುವುದು ಮತ್ತು ಇತರೆ ಕೆಲಸಗಳನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ದಿನಾಂಕ 26.05.2013 ರಂದು ಮಾಗಡಿ ಆರಕ್ಷಕ ವೃತ್ತ ನಿರೀಕ್ಷಕರವರು ಮಾಗಡಿ ವಿಧಾನಸಭಾ ಕ್ಷೇತ್ರ 182 ರಲ್ಲಿ ನಡೆದ ಮಾಗಡಿ ವಿಧಾನಸಭಾ ಕ್ಷೇತ್ರದ 26 ಜನರ ಹೆಸರು ಅನಧಿಕೃತವಾಗಿ ಸೇರ್ಪಡೆಗೊಂಡ ಬಗ್ಗೆ ಮಾನ್ಯ ಚುನಾವಣಾಧಿಕಾರಿ ಹಾಗೂ ತಹಸಿಲ್ದಾರ್ ರವರು ದೂರು ನೀಡಿದ್ದು ಆ ಬಗ್ಗೆ ಮಾಗಡಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅನಧಿಕೃತವಾಗಿ ಸೇರ್ಪಡೆಗೊಂಡ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಿದವರ ಬಗ್ಗೆ ತನಿಖಾ ಕಾಲದಲ್ಲಿ ನಮ್ಮ ಸೈಬರ್ ಸೆಂಟರ್ ನಿಂದ 8 ಜನ ಮತದಾರರನ್ನು ಅನಧಿಕೃತವಾಗಿ ಸೇರ್ಪಡೆ ಮಾಡಿರುವ ಬಗ್ಗೆ ತಿಳಿದುಬಂದಿರುತ್ತದೆ ಎಂದರೆ ಸಾಕ್ಷಿ ಇಲಲ ಎಂದು ನುಡಿಯುತ್ತಾರೆ. ನಾನೂ ಸಹ ಪರಿಶೀಲಿಸಲಾಗಿ ಬೆಂಗಳೂರು ಸಿಐಡಿ ಸೆಎಬರ್ ಪೋಲಿಸ್ ರವರು ಅನಧಿಕೃತವಾಗಿ ಸೇರ್ಪಡೆಗೊಂಡ ಮತದಾರರ ಪೈಕಿ 8 ಜನರು ನಮ್ಮ ಸೈಬರ್ ಸೆಂಟರ್ ನಿಂದ ಸರ್ಕಾರಿ ಲಾಗಿನ್ ಅನ್ನು ಉಪಯೋಗಿಸಿಕೊಂಡು ಯಾರದೋ ಚಿತಾವಣೆಯಿಂದ 2 ಮತ್ತು 3 ನೇ ಅರೋಪಿಗಳು ಮಾಡಿರುವುದು ತಿಳಿದು ಬಂದಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 8 ತಿಂಗಳಿನಿಂದ 2 ಮತ್ತು 3 ನೇ ಆರೋಪಿಗಳು ಸೈಬರ್ ಸೆಂಟರ್ ಅನ್ನು ನಡೆಸುತ್ತಿದ್ದು ನಾನು ಸೈಬರ್ ಸೆಂಟರ್ ಗೆ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನಡಿಯುತ್ತಾರೆ. ಆದ್ದರಿಂದ ಮಾಗಡಿ ತಾಲ್ಲೂಕು ಕಛೇರಿಯ ಸರ್ಕಾರಿ ಲಾಗಿನ್ ಅನ್ನು ತಿಳಿದು ಕೊಂಡು ಅನಧಿಕೃತವಾಗಿ 8 ಜನ ಮತದಾರರ ಹೆಸರನ್ನು ಅನಧಿಕೃತವಾಗಿ ಮಾಗಡಿ ವಿಧಾನ ಸಭಾ ಕ್ಷೇತ್ರದ ಮತದಾರರ ಪಟ್ಟಿಗೆ ಸೇರಿಸಿದ್ದು 2 ಮತ್ತು 3 ನೇ ಆರೋಪಿಗಳ ಮೇಲೆ ಹಾಗೂ ಉತ್ತೇಜನ ನೀಡಿದವರನ್ನು ಪತ್ತೆ ಮಾಡಿ

ಕಾನೂನು ರೀತಿ ಕ್ರಮ ಜರುಗಿಸಬೇಕಾಗಿ ಕೋರುತ್ತೇನೆ ಎಂದು ಹೇಳಿಕೆ ನೀಡಿದ್ದೆನು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳ ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಆರ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**